~ಮುಂಜಾನೆ ಮಾತು~

ಪರಿಶ್ರಮವಹಿಸಲು
ತಯಾರಾದವರಿಗೆ
ಯಶಸ್ಸು ಕೈಗೆಟುಕುವಷ್ಟು
ಹತ್ತಿರದಲ್ಲಿರುತ್ತದೆ. ಪರಿಶ್ರಮ
ಮತ್ತು ಪ್ರಾಮಾಣಿಕತೆಗಳು
ನಿರಂತರ ಯಶಸ್ಸಿಗೆ
ಕಾರಣವಾಗುತ್ತವೆ.

ವಿಜಯವಾಣಿ

ನಂ.1 ಕನ್ನಡ ದಿನಪತ್ರಿಕೆ

ಕನ್ನಡಿಗರ ಧ್ವನಿ



ಬೆಂಗಳೂರು · ಮಂಗಳೂರು · ಹುಬ್ಬಳ್ಳಿ · ವಿಜಯಪುರ · ಮೈಸೂರು · ಗಂಗಾವತಿ · ಚಿತ್ರದುರ್ಗ · ಶಿವಮೊಗ್ಗ · ಕಲಬುರಗಿ · ಬೆಳಗಾವಿ | VIJAYAVANI ● MANGALURU | ಮಂಗಳೂರು ● ಸಂಪುಟ 6 ● ಸಂಚಿಕೆ 219

vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 8 ನವೆಂಬರ್ 2017 | ಬುಧವಾರ

# ಮಂಗಳೂರು ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಚಾಂಪಿಯನ್

## ವಿಟಿಯು 20ನೇ ಅಂತರ ಕಾಲೇಜು ಅಥ್ಲೆಟಿಕ್ಸ್ | ಆಳ್ವಾಸ್ ಮೂಡುಬಿದಿರೆ ರನ್ನರ್ಅಪ್

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕ್ರೀಡಾಂಗಣದಲ್ಲಿ ನಡೆದ ವಿಟಿಯು 20ನೇ ಅಂತರ ಕಾಲೇಜು ಅಥ್ಲೆಟಿಕ್ಸ್‌ನಲ್ಲಿ ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಸಮಗ್ರ ಪ್ರಶಸ್ತಿ ಗೆದ್ದುಕೊಂಡಿದೆ.

» ಪುತ್ತೂರು ವಿವೇಕಾನಂದ ಕಾಲೇಜು ತಂಡಕ್ಕೂ ಪ್ರಶಸ್ತಿ



ಬೆಳಗಾವಿಯಲ್ಲಿ ನಡೆದ ಅಂತರ ಕಾಲೇಜು ಅಥ್ಲೆಟಿಕ್ಸ್‌ನಲ್ಲಿ ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆದ ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ತಂಡ.

ಪುರುಷರ ವಿಭಾಗದಲ್ಲಿ 35 ಅಂಕ ಪಡೆದ ಮಂಗಳೂರಿನ ಸಹ್ಯಾದ್ರಿ ಕಾಲೇಜು ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. 26 ಅಂಕ ಪಡೆದ ಮೂಡುಬಿದಿರೆ ಆಳ್ವಾಸ್ ಇಂಜಿನಿಯರಿಂಗ್ ಕಾಲೇಜು ತಂಡ ಮೊದಲ ರನ್ನರ್ಅಪ್ ಹಾಗೂ 22 ಅಂಕ ಪಡೆದ ಪುತ್ತೂರಿನ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ತಂಡ ಎರಡನೇ ರನ್ನರ್ಅಪ್ ಸ್ಥಾನ ಪಡೆಯಿತು.

ಮಹಿಳೆಯರ ವಿಭಾಗದಲ್ಲಿ 45 ಅಂಕ ಪಡೆದ ಸಹ್ಯಾದ್ರಿ ಕಾಲೇಜು ತಂಡ ಚಾಂಪಿಯನ್, 39 ಅಂಕ ಪಡೆದ ಆಳ್ವಾಸ್ ಇಂಜಿನಿಯರಿಂಗ್ ಕಾಲೇಜು ತಂಡ ಮೊದಲ ರನ್ನರ್ಅಪ್ ಹಾಗೂ 31 ಅಂಕ ಪಡೆದ ಕಾರ್ಕಳದ ಎನ್ಎಂಎಎಂ ಇಂಜಿನಿಯರಿಂಗ್ ಕಾಲೇಜು ಎರಡನೇ ರನ್ನರ್ ಅಪ್ ಆಗಿ ಹೊರಹೊಮ್ಮಿತು.

**ಸಮಾರೋಪ ಸಮಾರಂಭ:** ವಿಟಿಯು ಸಭಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಬೆಳಗಾವಿ ಮಹಾನಗರ ಪೊಲೀಸ್ ಆಯುಕ್ತ ಟಿ.ಜಿ.ಕೃಷ್ಣ ಭಟ್ ಟ್ರೋಫಿ ವಿತರಿಸಿದರು. ಕುಲಪತಿ ಡಾ.ಕರಿಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು.

### ವೈಯಕ್ತಿಕ ಚಾಂಪಿಯನ್

ಪುರುಷರ ವಿಭಾಗದಲ್ಲಿ 1715 ಅಂಕ ಪಡೆದ ಬೆಂಗಳೂರಿನ ದಯಾನಂದ ಸಾಗರ ಇಂಜಿನಿಯರಿಂಗ್ ಕಾಲೇಜಿನ ವೈಭವ ಪಾಟೀಲ ಹಾಗೂ ಮಹಿಳೆಯರ ವಿಭಾಗದಲ್ಲಿ 1767 ಅಂಕ ಪಡೆದ ಮಂಗಳೂರಿನ ಸಹ್ಯಾದ್ರಿ ಕಾಲೇಜಿನ ಎ.ಮನೀಶಾ ಉತ್ತಮ ಕ್ರೀಡಾಪಟು ಗೌರವಕ್ಕೆ ಪಾತ್ರರಾದರು.

ಬುಧವಾರ, 8 ನವೆಂಬರ್ 2017 | ಪುಟಗಳು: 14+4+4 | ಬೆಲೆ: ₹ 5.00

www.vijaykarnataka.com

ಸಂಪುಟ: 17 | ಸಂಚಿಕೆ: 102

VK

ವಿಜಯ ಕರ್ನಾಟಕ

ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್: ಫೈನಲ್ ಪ್ರವೇಶಿಸಿದ ಮೇರಿ ಕೊಮ್ P12

82ನೇ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸೈನಾ ನೆಹ್ವಾಲ್ ಮತ್ತು ಪಿ ವಿ ಸಿಂಧೂ ಪ್ರಶಸ್ತಿಗಾಗಿ ಸೆಣಸಾಡಲಿದ್ದಾರೆ. P12

ಕುಡುಕ ನಿರ್ಮಾಪಕರೊಬ್ಬರಿಂದ ನಾನು ಕಿರುಕುಳಕ್ಕೆ ಒಳಗಾಗಿದ್ದೆ: ನಟಿ ಸ್ವರ ಭಾಸ್ಕರ್

# ಡಾ. ನವೀನ್ ಬಪ್ಪಳಿಗೆಯವರಿಗೆ ಸಂಶೋಧನಾ ಅನುದಾನ



**ಕಾರ್ಕಳ:** ಮಂಗಳೂರು ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ನವೀನ್ ಬಪ್ಪಳಿಗೆ ಅವರ ಸ್ಟ್ರಕ್ಚರಲ್ ಕ್ಯಾರಕ್ಟರೈಸೇಶನ್ ಆಫ್ ಫೆರೋ ಎಲೆಕ್ಟ್ರಿಕ್ ಥಿನ್ ಫಿಲ್ಮ್ಸ್ ಗ್ರೋನ್ ಬೈ ಸ್ಪಿನ್ ಕೋಟಿಂಗ್ ಎಂಬ ಪ್ರೊಜೆಕ್ಟ್‌ಗೆ ಕರ್ನಾಟಕ ಸರಕಾರದ ವಿಶನ್ ಗ್ರೂಪ್ ಫಾರ್ ಸಯನ್ಸ್ ಎಂಡ್ ಟೆಕ್ನಾಲಜಿಯ ಶಿಕ್ಷಕ ಸಂಶೋಧಕಾ ವಿಭಾಗದ 2016–17ನೇ ಅನುದಾನಕ್ಕೆ ಆಯ್ಕೆಯಾಗಿದೆ. ವಾರ್ಷಿಕ 3 ಲಕ್ಷ ರೂ. ಅನುದಾನವಾಗಿದ್ದು, ಪ್ರಸಕ್ತ ಅನುದಾನದಲ್ಲಿ ಕಾಲೇಜಿನ ಸಂಶೋಧನ ವಿಭಾಗಕ್ಕೆ ಸ್ಪಿನ್ ಕೋಟರ್, ಟೆಂಪರೇಚರ್ ಕಂಟ್ರೋಲ್‌ಡ್ ಓವೆನ್ ಹಾಗೂ ಇತರ ಥಿನ್ ಫಿಲ್ಮ್ ತಯಾರಿಕೆಯ ಸಾಧನಗಳು ಲಭಿಸಲಿದ್ದು ಇದು ಸಂಶೋಧಕರಿಗೆ ಮತ್ತು ಸಂಶೋಧನಾಸಕ್ತರಿಗೆ ಪ್ರಯೋಜನವಾಗಲಿದೆ.

BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | WEDNESDAY, NOVEMBER 8, 2017 | PAGES 28 | PRICE ₹4.50

THE TIMES OF INDIA

INCLUDES 4 PAGES OF MANGALORE TIMES* (*MANGALURU, MANIPAL & UDUPI CITY AREAS ONLY)



# Door bells in DK will soon chime for cleaner district

## Sahyadri College, Ramakrishna Mission Fund The Project

Chethan.Misquith
@timesgroup.com

> This initiative is part of the ODF plus activity, wherein a positive change in the mindset of the people to sustain the change is required. This will not happen overnight, but I am sure change will be brought about. The jingle will certainly sensitise and alert the public in this regard.
>
> **M R Ravi** | CEO, ZILLA PANCHAYAT, DAKSHINA KANNADA



**Mangaluru:** In a few months, all the door bells in the district will chime 'Swachhathe endu koodi haaduva, kuniyuta naliyuta holeyuva sooryananthe jille swachh maaduva' (Let us join, sing and dance our way in cleaning our district as clean and bright as the sun).

This is because the zilla panchayat, as part of its initiative to build a cleaner district, has decided to replace all the calling bells with this song.

Zilla Panchayat CEO M R Ravi, who has composed the jingle, told TOI that nine bells have already been installed in his office including the one outside his chamber to know the response of the office staff and the public. "As I pitched the idea with the management of Sahyadri College, the director of the institute swung into action and the students designed the bell as desired," Ravi said.

The project will be taken up on a pilot basis at Kallige village in Bantwal. There are 1,127 houses in the village, of which 400 have bells. Each bell costs Rs 450. The pilot project may require around Rs 5 lakh. Sahyadri College and Ramakrishna Mission will sponsor this project and ZP is not spending any money on the project, he added.

Ravi said depending upon the success, the idea will be shared with the state as well as the central governments for implementation.

Ravi said the 2.48-minute jingle will be divided into four stages. "When a guest rings the bell for the first time, only the first stanza of the jingle will play. The remaining three stanzas will be played with the bells that follow," he said, adding that the sequence of the stanzas cannot be changed. After the final edit, the jingle will come down to 2 minutes and 9 seconds.

### Behavioural change

Speaking further, Ravi said though Dakshina Kannada was declared open-defecation free (ODF), there were still 3,330 households that did not use toilets. When he said this issue could be addressed, he opined the biggest challenge was to sustain the ODF tag and hence behavioural change among the general masses was required to bring about this change.

"This initiative is part of the ODF plus activity, wherein a positive change in the mindset of the people to sustain the change is required. This will not happen overnight, but I am sure change will be brought about. The jingle will certainly sensitise and alert the public in this regard," he said.

BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | WEDNESDAY, NOVEMBER 8, 2017 | PAGES 28 | PRICE ₹4.50

THE TIMES OF INDIA

INCLUDES 4 PAGES OF MANGALORE TIMES* (*MANGALURU, MANIPAL & UDUPI CITY AREAS ONLY)



**Minister visits college:** Union minister of state for drinking water and sanitation Ramesh Jigajinagi visited Sahyadri College of Engineering and Management, recently. Chairman of the college Manjunath Bhandary was present.

ಬುಧವಾರ, ನವೆಂಬರ್ 8, 2017 | ₹ 5.00 • www.prajavani.net f /prajavani.ne

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

**ಕಮಲ್ ಆ್ಯಪ್**
ರಾಜಕೀಯ ಪ್ರವೇಶಕ್ಕೆ ಸಿದ್ಧತೆ ನಡೆಸುತ್ತಿರುವ ಹಿರಿಯ ನಟ ಕಮಲ್ ಹಾಸನ್ ಅವರು ಚೆನ್ನೈನಲ್ಲಿ ಮಂಗಳವಾರ 'ಮಯ್ಯಂ ವಿಸಿಲ್' ಎಂಬ ಆ್ಯಪ್ ಬಿಡುಗಡೆ ಮಾಡಿದರು

# ಸ್ವಚ್ಛತೆಯ ಕಾಲಿಂಗ್ ಬೆಲ್‌ಗೆ ಮೆಚ್ಚುಗೆ

## ಸಹ್ಯಾದ್ರಿ ಕಾಲೇಜಿಗೆ ರಾಜ್ಯ ಸಚಿವ ರಮೇಶ ಜಿಗಜಿಣಗಿ ಭೇಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಜಿಲ್ಲೆಯಲ್ಲಿ ಸ್ವಚ್ಛತೆಯ ಜಾಗೃತಿ ಮೂಡಿಸಲು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಅಳವಡಿಸಲು ಉದ್ದೇಶಿಸಿರುವ ಕಾಲಿಂಗ್ ಬೆಲ್‌ಗಳನ್ನು ಕೇಂದ್ರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಖಾತೆ ರಾಜ್ಯ ಸಚಿವ ರಮೇಶ ಜಿಗಜಿಣಗಿ ವೀಕ್ಷಿಸಿದರು.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಕ್ಯಾಂಪಸ್‌ಗೆ ಭೇಟಿ ನೀಡಿದ ಅವರು, ಸಂಸ್ಥೆ ಅಧ್ಯಕ್ಷ ಮಂಜುನಾಥ್ ಭಂಡಾರಿ ಅವರೊಂದಿಗೆ ಚರ್ಚೆ ನಡೆಸಿದರು. ಸಂಸ್ಥೆಯಿಂದ ಪರಿಚಯಿಸಲಾಗಿರುವ ವಿವಿಧ ವಿದ್ಯಾರ್ಥಿ ಕೇಂದ್ರಿತ ಉಪಕ್ರಮಗಳನ್ನು ವೀಕ್ಷಿಸಿದರು.

ಕಾಲೇಜಿನ ವಿದ್ಯಾರ್ಥಿಗಳ ಪ್ರತಿಭೆ ಹೊಸ ಪರಿಕಲ್ಪನೆಗಳನ್ನು ಶ್ಲಾಘಿಸಿದ ಜಿಗಜಿಣಗಿ, ಕೇವಲ 10 ವರ್ಷಗಳಲ್ಲಿ ಸಂಸ್ಥೆಯ ಪ್ರಗತಿ ಹಾಗೂ ವಿದ್ಯಾರ್ಥಿಗಳಿಗೆ ನೀಡಿದ ಪ್ರೋತ್ಸಾಹವನ್ನು ಮೆಚ್ಚಿದರು.



ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿದ ಕೇಂದ್ರ ಸಚಿವ ರಮೇಶ ಜಿಗಜಿಣಗಿ, ಸ್ವಚ್ಛತೆಯ ಜಾಗೃತಿ ಮೂಡಿಸುವ ಕಾಲಿಂಗ್ ಬೆಲ್ ವೀಕ್ಷಿಸಿದರು.

ಇದೇ ಸಂದರ್ಭದಲ್ಲಿ ಸ್ವಚ್ಛತಾ ಹಾಡಿನ ಕಾಲಿಂಗ್ ಬೆಲ್ ರೂಪಿಸಿದ ಮಂಜುನಾಥ್ ಭಂಡಾರಿ ಮತ್ತು ಆರ್‌ಡಿಎಲ್ ಟೆಕ್ನಾಲಜೀಸ್ ಸಿಇಒ ರಾಘವ್ ಶೆಟ್ಟಿ ಅವರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ವಿವರಣೆ ನೀಡಿದ ಮಂಜುನಾಥ ಭಂಡಾರಿ, ಈ ಕಾಲಿಂಗ್ ಬೆಲ್, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ.ಎಂ.ಆರ್. ರವಿ ಅವರ ಸ್ವಚ್ಛ ಭಾರತ ಪರಿಕಲ್ಪನೆಯಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ಸಂಗೀತದ ಮೂಲಕ ಸ್ವಚ್ಛತೆಯ ಜಾಗೃತಿ ಮೂಡಿಸುತ್ತದೆ ಎಂದು ತಿಳಿಸಿದರು.


ಈ ವಿಶಿಷ್ಟ ಪರಿಕಲ್ಪನೆಯನ್ನು ಡಾ. ರವಿಯವರು, ಸಹ್ಯಾದ್ರಿ ಸಂಸ್ಥೆಯೊಂದಿಗೆ ಚರ್ಚಿಸಿದ್ದು, ಇದಕ್ಕೆ ಪ್ರತಿಕ್ರಿಯಿಸಿದ ಸಂಸ್ಥೆಯ ತಜ್ಞರ ತಂಡವು ವಿನೂತನ ಕಾಲಿಂಗ್ ಬೆಲ್ ಅನ್ನು ರೂಪಿಸಿದೆ ಎಂದು ಅವರು ಹೇಳಿದರು.

ಅದರಲ್ಲಿ ಸ್ವಚ್ಛತೆ ಜಾಗೃತಿ ಟೋನ್ ಜತೆಗಿನ ಕರೆ ಗಂಟೆ ವಿನ್ಯಾಸಗೊಳಿಸಲಾಗಿದೆ. ಈ ಕರೆ ಗಂಟೆಗಳನ್ನು ಈಗಾಗಲೇ ಹಲವು ಕಡೆ ಸ್ಥಾಪಿಸಲಾಗಿದೆ. ಎಂದು ಅವರು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಬಳಸಲಾಗುತ್ತಿದೆ. ಪೈಲಟ್ ಕಾರ್ಯಕ್ರಮದ ಭಾಗವಾಗಿ, ಅಂತಹ ಕರೆ ಗಂಟೆಗಳನ್ನು ಸಹ್ಯಾದ್ರಿ ಪ್ರಾಯೋಜಿಸುವ ಇಚ್ಛೆಯನ್ನು ಹೊಂದಿದೆ ಎಂದು ಭಂಡಾರಿ ವಿವರಿಸಿದರು.

THE NEW
INDIAN
EXPRESS
MANGALURU • WEDNESDAY • NOVEMBER 08, 2017 • ₹5.00 • PAGES 18 • CITY EDITION

CENTRAL LIBRARY



# Sahyadri College sets up a startup incubator to benefit niche industries

## It will feed human resource and produce materials for various special sectors such as aerospace, nuclear, defense, oil and gas

**VINCENT D'SOUZA @ Mangaluru**

IN order to make the engineering students 'industry-ready' for niche sectors such as defense, aerospace, nuclear, oil and gas, a start-up has been established at Sahyadri College of Engineering and Management in Mangaluru.

The start-up - Caliper Engineering and Lab Pvt Ltd. - will be inaugurated on November 11. Besides upskilling the mechanical, automotive, production and mechantroinics engineers students from Sahyadri college as well as other institutions, it will also take up production for niche industries in lieu of 'Make in India' programme, train budding engineers on best manufacturing practices through real time production and will be a platform for mechanical incubators and a mentoring centre for more start-Ups.

> **The idea of enriching students originated with a vision to create 'engineers' and not 'engineering students'.r**
>
> SM Sunder, CEO of Caliper

SM Sunder, CEO of Caliper, said the idea of enriching students originated from Sahyadri chairman Manjunath Bhandary with a vision to create 'engineers' and not 'engineering students'. The unit set up at a cost of Rs 3 crore will be equipped with high-precision CNC machines supported with 3D modeling, CNC programming and cost estimation software; world-class welding automation comprehensively equipped with state of the art TOG/MIG welding machines; best quality control systems, etc.


The CEO and M V Subramanian, MD of a MNC, both whom have over 30 years of industrial experience, have devised the training programme carefully keeping in mind the gaps observed in the indistries. "This is not the normal industrial training presently being rendered in the market but a unique one. Best part of the training programme is, every student will be able to have hands-on experience on the machinery/equipment/software etc. We will also provide training on best manufacturing practices in the shop floor as well as work culture, which reduces gestation time for all employers in utlising the human resources," said Sunder.

The duration of the training programme varies from 20 to 80 hours of intense virtual experience as we all hands on experience on respective field/equipment and the fee ranges from Rs 2,000 to Rs 15,000. It will also offer internships for students.

Sunder said the company has registered with ISRO, DRDO, Ordinance Factory, Nuclear Power Corporation and is approaching other Industries too.

THE NEW
INDIAN
EXPRESS
MANGALURU • WEDNESDAY • NOVEMBER 08, 2017 • ₹5.00 • PAGES 18 • CITY EDITION

CENTRAL LIBRARY



# CET dates fixed, exam advanced by 15 days

**EXPRESS NEWS SERVICE**
@ Bengaluru

THE time table for Common Entrance Test (CET), 2018, for admission to under graduate professional courses in the state was released on Tuesday. The test dates have been advanced by 15 days because of the upcoming Assembly elections.

As per the official communication from Karnataka Examinations Authority (KEA), the test will be conducted on April 18, 19 and 20.

The test is usually held in the first week of May.

"We have released the time table and the test will be conducted for all other under graduate professional courses except medical and dental," a KEA official said.

**Time table**

**April 18**

10.30am to 11.50am - Biology

2.30pm to 3.50pm - Mathematics

**April 19**

10.30am to 11.50am - Physics

2.30pm to 3.50pm - Chemistry

**April 20**

11.30am to 12.30pm - Kannada Language Test for Horanadu and Gadinadu Kannadiga candidates

~ಮುಂಜಾನೆ ಮಾತು~
ಪರಿಶ್ರಮವಹಿಸಲು ತಯಾರಾದವರಿಗೆ ಯಶಸ್ಸು ಕೈಗೆಟುಕುವಷ್ಟು ಹತ್ತಿರದಲ್ಲಿರುತ್ತದೆ. ಪರಿಶ್ರಮ ಮತ್ತು ಪ್ರಾಮಾಣಿಕತೆಗಳು ನಿರಂತರ ಯಶಸ್ಸಿಗೆ ಕಾರಣವಾಗುತ್ತವೆ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1* ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 6 ● ಸಂಚಿಕೆ 219
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 8 ನವೆಂಬರ್ 2017 | ಬುಧವಾರ 8 NOVE



# ಸಿಇಟಿ ವೇಳಾಪಟ್ಟಿ ಪ್ರಕಟ

## ಏ.18ರಿಂದ 20ರವರೆಗೆ ನಡೆಯಲಿದೆ ಪರೀಕ್ಷೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ) ನಡೆಸುವ 2018ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಏ. 18ರಿಂದ 20ರವರೆಗೆ ನಡೆಯಲಿದೆ.

| ದಿನಾಂಕ | ವಿಷಯ | ಸಮಯ | ಅಂಕಗಳು |
|---|---|---|---|
| ಏ.18 | ಜೀವಶಾಸ್ತ್ರ | ಬೆ.10.30-11.50 | 60 |
| | ಗಣಿತ | ಮ.2.30-3.50 | 60 |
| ಏ.19 | ಭೌತಶಾಸ್ತ್ರ | ಬೆ.10.30-11.50 | 60 |
| | ರಸಾಯನಶಾಸ್ತ್ರ | ಮ.2.30-3.50 | 60 |
| ಏ.20 | ಕನ್ನಡ ಭಾಷೆ | ಬೆ.11.30-12.30 | 50 |

2017ನೇ ಸಾಲಿನ ಸಿಇಟಿ ಮೇ 2ರಿಂದ 4ರವರೆಗೆ ನಡೆದಿತ್ತು. ಈ ವರ್ಷ ವಿಧಾನ ಸಭೆ ಚುನಾವಣೆ ಇರುವುದರಿಂದ 15 ದಿನಗಳ ಮೊದಲೇ ಪರೀಕ್ಷೆ ನಡೆಸಲು ಕೆಇಎ ಮುಂದಾಗಿದೆ. ವೈದ್ಯಕೀಯ ಮತ್ತು ದಂತವೈದ್ಯಕೀಯ ಕೋರ್ಸ್‌ಗಳಿಗೆ ನೀಟ್ ಮತ್ತು ಆರ್ಕಿಟೆಕ್ಚರ್ ಕೋರ್ಸ್‌ಗಳ ಪ್ರವೇಶಕ್ಕೆ ನಾಟಾ ಪರೀಕ್ಷೆ ನಡೆಯಲಿದ್ದು, ಇದರ ಹೊರತಾಗಿ ಉಳಿದ ಕೋರ್ಸ್‌ಗಳ ಪ್ರವೇಶಕ್ಕೆ ಸಿಇಟಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಕೆಇಎ ವೆಬ್‌ಸೈಟ್ http://kea.kar.nic.in/ ನೋಡಬಹುದಾಗಿದೆ.

**ದಿನಾಂಕ ವಿಸ್ತರಣೆ** ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಪುನರಾವರ್ತಿತ ಅಭ್ಯರ್ಥಿಗಳ ಶುಲ್ಕ ಸಂದಾಯ ಮಾಡಲು ನಿಗದಿಪಡಿಸಿದ್ದ ಕೊನೆಯ ದಿನಾಂಕವನ್ನು ನ.11ರವರೆಗೆ ವಿಸ್ತರಿಸಿದೆ. ಹೆಚ್ಚಿನ ಮಾಹಿತಿಗೆ http://www.pue.kar.nic.in ನೋಡಬಹುದು.